# ಅಂಶ - 19 ಸಂಪಾದಕೀಯ ಲೇಖನ

**ವಿಷಯಕ್ರಮ**

19.0 ಉದ್ದೇಶ
19.1 ಪೀಠಿಕೆ
19.2 ಸಂಪಾದಕೀಯದ ಸ್ವರೂಪ
19.3 ಸಂಪಾದಕೀಯದ ಪ್ರಕಾರಗಳು
    19.3.1 ಸಮಾಜದಲ್ಲಿಯ ಅನ್ಯಾಯಗಳನ್ನು ಕುರಿತು
**ಅಭ್ಯಾಸ - 1**
    19.3.2 ಗಣ್ಯ ವ್ಯಕ್ತಿಗಳ ಆದರ್ಶವನ್ನು ಕುರಿತು
**ಅಭ್ಯಾಸ - 2**
    19.3.3 ರಾಜಕೀಯ ವಿದ್ಯಮಾನಗಳನ್ನು ಕುರಿತು
**ಅಭ್ಯಾಸ - 3**
19.4 ಸಾರಾಂಶ
**ಅಭ್ಯಾಸಗಳಿಗೆ ಉತ್ತರಗಳು**

## 19.0 ಉದ್ದೇಶ

- ಈ ಅಂಶದಿಂದ ಪ್ರತಿಯೊಂದು ಪತ್ರಿಕೆಯಲ್ಲಿ ಬರುವ 'ಸಂಪಾದಕೀಯ' ವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಿರಿ.
- ಸಂಪಾದಕೀಯ ಯಾವ ಪ್ರಕಾರದ್ದು ಎಂದು ಗುರುತಿಸಲು ಸಮರ್ಥರಾಗುವಿರಿ.
- ಸಂಪಾದಕೀಯದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಕೇವಲ ವ್ಯಕ್ತಿಗತವಾದವುಗಳೇ ಅಥವಾ ಸಾರ್ವಜನಿಕರ ವಿಚಾರಧಾರೆಯನ್ನು ವ್ಯಕ್ತಪಡಿಸುವವೇ ಎಂದು ಗುರುತಿಸುವಿರಿ.
- ಸಂಪಾದಕೀಯದ ಭಾಷೆ ಹೇಗೆ ಭಿನ್ನವಾಗಿರುತ್ತದೆ; ವಿಶಿಷ್ಟ ಭಾಷಾ ಬಳಕೆಯ ಉದ್ದೇಶವೇನೆಂದು ಅರ್ಥಮಾಡಿಕೊಳ್ಳುವಿರಿ.
- ಅಂಥ ಬರವಣಿಗೆಯನ್ನು ಪ್ರಯತ್ನಿಸಲು ಕಲ್ಪನೆಯನ್ನು ಪಡೆಯುವಿರಿ.

## 19.1 ಪೀಠಿಕೆ

ಯಾವುದೇ ಪತ್ರಿಕೆಯನ್ನು ಎತ್ತಿಕೊಂಡರೆ ಅದರಲ್ಲಿ ಸುದ್ದಿಯಿರುತ್ತದೆ. ಅದು ದೈನಿಕ ಪತ್ರಿಕೆಯಾದರೆ ಪ್ರತಿ ದಿನ ನಡೆದ ಘಟನೆಗಳೂ, ವಾರಪತ್ರಿಕೆಯಾದರೆ ವಾರದಲ್ಲಿ ನಡೆದ ಘಟನೆಗಳೂ, ಮಾಸಿಕ ಪತ್ರಿಕೆಯಾದರೆ ತಿಂಗಳಲ್ಲಿ ನಡೆದ ಘಟನೆಗಳೂ ವರದಿಯಾಗುತ್ತವೆ ಎಂದು ಅರ್ಥಮಾಡಬಹುದು. ಅಲ್ಲದೆ ಒಂದು ಪತ್ರಿಕೆ ಯಾವ ತರಹದ ಸುದ್ದಿಗಳಿಗಾಗಿ, ಅಥವಾ ಎಂಥ ವಿಷಯಗಳಿಗಾಗಿ ಮೀಸಲಾಗಿದೆ ಎಂಬುದರ ಮೇಲಿಂದ ಅದರಲ್ಲಿಯೂ ವಿಷಯಗಳ ಬಗ್ಗೆ ತಿಳಿದು ಬರುತ್ತದೆ. ಸುದ್ದಿ — ಸಮಾಚಾರ ಪತ್ರಿಕೆಗಳಲ್ಲಿ ಸುದ್ದಿ ಸಮಾಚಾರಗಳಿದ್ದಂತೆ, ಸಿನಿಮಾ ಪತ್ರಿಕೆಯಲ್ಲಿ ಸಿನಿಮಾ ವಿಷಯಗಳೇ ಇರುತ್ತವೆ. ಸಾಹಿತ್ಯಿಕ ಪತ್ರಿಕೆಯಲ್ಲಿ ಕಥೆ, ಕವನ, ಪ್ರವಾಸ ಲೇಖನ, ಚರಿತ್ರೆ, ಮೊದಲಾದವುಗಳಿದ್ದಂತೆ, ಸಂಶೋಧನ ಪತ್ರಿಕೆಯಲ್ಲಿ ವಿಮರ್ಶೆ, ಭಾಷೆಯ ಬಗ್ಗೆ ಚರ್ಚೆ ಇತ್ಯಾದಿ ಇರುತ್ತವೆ.

ಪತ್ರಿಕೆಗೆ ಒಬ್ಬ ಸಂಪಾದಕರು ಇದ್ದೇ ಇರುತ್ತಾರೆ. ಸಂಪಾದಕರ ಕೆಲಸವೆಂದರೆ, ಪ್ರಕಟಣೆಗಾಗಿ ಬಂದ ಎಲ್ಲ ಸಾಮಗ್ರಿಯನ್ನು ವಿಮರ್ಶಿಸಿ ಓದಿ, ಪ್ರಕಟಣೆಗೆ ಯೋಗ್ಯವಾದವುಗಳನ್ನು ಆಯಾ ವಿಷಯದ ಮಹತ್ವವನ್ನು ಆಧರಿಸಿ ಪ್ರಕಟಿಸುವುದು. ಇದರಿಂದ ನಾಡಿನಲ್ಲಿ, ದೇಶದಲ್ಲಿ ಪ್ರಪಂಚದಲ್ಲಿ ನಡೆದ ವಿಷಯಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ರೀತಿಯ ಮಾಹಿತಿ ಪ್ರತಿಯೊಬ್ಬ ಸಾಮಾಜಿಕನಿಗೆ ಅಗತ್ಯವಾಗಿರುತ್ತದೆ. ಅದರಿಂದ ಅವನು ಜಾಣನಾಗುತ್ತಾನೆ, ಅವನ ಅನುಭವ ಅಗತ್ಯವಾಗುತ್ತದೆ. ಈ ದಿಕ್ಕಿನಲ್ಲಿ ಓದುಗರನ್ನು ಸುಸಂಸ್ಕೃತರನ್ನಾಗಿ, ಜಾಣರನ್ನಾಗಿ ಮಾಡುವಲ್ಲಿ ವೃತ್ತಪತ್ರಿಕೆಗಳ, ಅವುಗಳ ಸಂಪಾದಕರ ಕರ್ತವ್ಯ ಅತ್ಯಂತ ಮಹತ್ವದ್ದಾಗಿದೆ.

## 19.2 ಸಂಪಾದಕೀಯದ ಸ್ವರೂಪ

ಸಂಪಾದಕರ ಕರ್ತವ್ಯ ಕೇವಲ ಸುದ್ದಿ, ಸಮಾಚಾರವನ್ನು ಓದುಗರಿಗೆ ಮುಟ್ಟಿಸುವುದು ಮಾತ್ರವೇ ಅಲ್ಲ, ಸುತ್ತಮುತ್ತ ನಡೆಯುತ್ತಿರುವ ಘಟನೆಗಳನ್ನು ಹೇಗೆ ನೋಡಬೇಕು. ನಾಡಿನ ಮತ್ತು ದೇಶದ ಹಿತದ ದೃಷ್ಟಿಯಿಂದ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬ ಬಗ್ಗೆ ಪರಿಜ್ಞಾನವನ್ನೂ ವಿಮರ್ಶಾತ್ಮಕ ಬುದ್ಧಿಯನ್ನೂ ಉಂಟು ಮಾಡುವುದು ಸಂಪಾದಕರ ಕರ್ತವ್ಯ. ಈ ಉದ್ದೇಶಕ್ಕಾಗಿ ಪ್ರತಿಯೊಂದು ಪತ್ರಿಕೆಯಲ್ಲಿ "ಸಂಪಾದಕೀಯ" ಎಂಬ ಸ್ಥಳವಿರುತ್ತದೆ. ಪತ್ರಿಕೆಯಲ್ಲಿ ಮಹತ್ವದ ಸ್ಥಳವನ್ನು ಆಯ್ದು ಸಂಪಾದಕೀಯಕ್ಕಾಗಿ ಕಾಯ್ದಿರಿಸಿರುತ್ತಾರೆ. ಉದಾಹರಣೆಗಾಗಿ ನಾಲ್ಕು ಪುಟಗಳ ಪತ್ರಿಕೆಯಲ್ಲಿ, ಎರಡನೆಯ ಪುಟದ ಮೊದಲ ಎರಡು ಕಲಂ ಎಂಟು ಪುಟಗಳ ಪತ್ರಿಕೆಯಿದ್ದರೆ ನಾಲ್ಕನೆಯ ಪುಟದ ಮೊದಲ ಎರಡು ಕಲಂ, ಹೀಗೆ. ಏಕೆಂದರೆ ಸಾಮಾನ್ಯವಾಗಿ, ಮೊದಲನೆಯ ಪುಟ ಅಂದರೆ ಮುಖಪುಟದಲ್ಲಿ, ಹಿಂದಿನ ದಿನ ನಡೆದ ರಾಜಕೀಯ, ಸಾಮಾಜಿಕ, ಆರ್ಥಿಕ ರಂಗದ ಸುದ್ದಿಗಳಿರುತ್ತವೆ. ಏಕೆಂದರೆ ವೃತ್ತಪತ್ರಿಕೆಯಲ್ಲಿ ಸುದ್ದಿಗೇ ಮೊದಲ ಮಹತ್ವ. ಎಷ್ಟೇ ಪುಟದ ಪತ್ರಿಕೆ ಇದ್ದರೂ ಇದನ್ನು ಎಲ್ಲ ಪತ್ರಿಕೆಗಳು ಅನುಸರಿಸುತ್ತವೆ. ಉದಾಹರಣೆಗೆ ಎಂಟು ಪುಟದ ಪತ್ರಿಕೆ, ಅಂದರೆ ಕನ್ನಡ ನಾಡಿನಲ್ಲಿ ಹೆಚ್ಚು ಪ್ರಚಾರದಲ್ಲಿರುವ, ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಉದಯವಾಣಿ ಪತ್ರಿಕೆಗಳನ್ನು ಅವಲೋಕಿಸಿದಾಗ ಸಂಪಾದಕೀಯವು ಸಾಮಾನ್ಯವಾಗಿ ನಾಲ್ಕನೆಯ ಪುಟದ ಮೊದಲ ಎರಡು ಕಲಂಗಳಲ್ಲಿ ಇರುತ್ತದೆ. ಮಹತ್ವದ ಘಟನೆಯೇನಾದರೂ ಇದ್ದಲ್ಲಿ ಅದು ಮುಖಪುಟದಲ್ಲಿ ಇರಬಹುದು. ಅಂದರೆ ಪ್ರಮುಖ ಸುದ್ದಿಗಳೊಡನೆ ಸಂಪಾದಕೀಯವನ್ನೂ ಜನರು ಅಷ್ಟೇ ಮುಖ್ಯವಾಗಿ ಓದಬೇಕೆಂದು ಅರ್ಥ.

ಸಂಪಾದಕೀಯಕ್ಕೆ 'ಅಗ್ರಲೇಖ'ವೆಂಬ ಹೆಸರೂ ಇದೆ.
ಪತ್ರಿಕೆಯ ಸುದ್ದಿಗಾರರು ಬರೆದ ಸುದ್ದಿಗಳಲ್ಲಿ, ಬೇರೆ ಬೇರೆಯವರು ಬರೆದು ಕಳಿಸಿದ ಸುದ್ದಿಗಳಲ್ಲಿ, ಲೇಖನಗಳಲ್ಲಿ ಪ್ರತಲೇಖನವೇ ಮಹತ್ವದ್ದು ಎಂಬ ಅರ್ಥಬರುತ್ತದೆ. ಯಾವ ಪಕ್ಷಪಾತವಿಲ್ಲದೆ, ಯಾವುದೋ ಒಂದು ರಾಜಕೀಯ ಪಕ್ಷದ ಛಾಯ ಇಲ್ಲದೆ ಬರೆದ ಸಂಪಾದಕೀಯ ನಿಜವಾಗಿಯೂ ಅಗ್ರವೆನ್ನಿಸಿಕೊಳ್ಳಲು ಯೋಗ್ಯ. ಆದರೆ ಇಂದಿನ ನಮ್ಮ ದೇಶದ ಸಾಮಾಜಿಕೆ ರಾಜಕೀಯ ವ್ಯವಸ್ಥೆಯಲ್ಲಿ ಇಂಥ ನಿಷ್ಪಕ್ಷಪಾತ ಪತ್ರಿಕೆಗಳನ್ನು ವಿರಳವಾಗುತ್ತವ್ವೆ ಪ್ರತಿಯೊಂದು ವೃತ್ತಪತ್ರಿಕೆಯಲ್ಲೂ ಒಂದಿಲ್ಲೊಂದು ರಾಜಕೀಯ ಪಕ್ಷದತ್ತ ವಾಲಿಕೊಂಡಿರುತ್ತದೆ. ಆಡಳಿತ ಪಕ್ಷದತ್ತ ಇದ್ದರೆ ಸರಕಾರ ಮಾಡಿದ್ದೆಲ್ಲ ಸರಿ ಎಂದೂ, ವಿರೋಧ ಪಕ್ಷದತ್ತ ಇದ್ದರೆ ಸರಕಾರ ಮಾಡಿದ್ದೆಲ್ಲ ತಪ್ಪು ಎಂದೂ ವಾದಿಸುತ್ತಾ ಸಾಗುತ್ತವೆ. ಇದರಿಂದ ಜನ ಸಾಮಾನ್ಯರ ತಿಳುವಳಿಕೆ ಹೆಚ್ಚುವ ಬದಲು ತಪ್ಪು ಭಾವನೆಗಳೇ ಹೆಚ್ಚುತ್ತವೆ. ಆದುದರಿಂದ ಇಂದಿನ ನಮ್ಮ ಸಮಾಜದಲ್ಲಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ಓದಿ, ಎಲ್ಲರೂ ಹೇಳುವುದನ್ನು ವಿವೇಕದಿಂದ ತೂಗಿ ಸರಿ ತಪ್ಪನ್ನು ನಿರ್ಧರಿಸಬೇಕಾದ ಅಗತ್ಯ ಬಂದಿದೆ. ಇದು ರಾಜಕೀಯ ವಿಷಯಗಳ, ಮತ್ತು ಅವುಗಳಿಂದ ಸಮಾಜದ ಮೇಲೆ ಆಗುವ ಪರಿಣಾಮಗಳನ್ನೂ ಕುರಿತಾಯಿತು.

## 19.3 ಸಂಪಾದಕೀಯದ ಪ್ರಕಾರಗಳು

ಇನ್ನು ಕೆಲವು ಸಾಮಾನ್ಯ ಸಾಮಾಜಿಕ, ವಿಷಯಗಳನ್ನು ಕುರಿತು ಎಲ್ಲರ ಅಭಿಪ್ರಾಯ ಒಂದೇ ರೀತಿ ಆಗಿರುತ್ತದೆ. ಉದಾಹರಣೆಗೆ ಸಹಗಮನ, ವರದಕ್ಷಿಣೆ, ಭ್ರಷ್ಟಾಚಾರ, ಅನೀತಿ ಮೊದಲಾದವುಗಳ ಬಗ್ಗೆ ಎರಡು ಅಭಿಪ್ರಾಯಗಳು

ಇರುವುದಿಲ್ಲ. ಅಂಥ ವಿಷಯಗಳನ್ನು ಕುರಿತು, ಭಿನ್ನ ಸಂಪಾದಕೀಯಗಳನ್ನು ಓದುವುದರಿಂದ ವಿಷಯವನ್ನು ಪರಿಣಾಮಕಾರಿಯಾಗಿ ಹೇಗೆ ಮಂಡಿಸಬೇಕೆಂಬ ಶೈಲಿ ಗೊತ್ತಾಗುತ್ತದೆ. ಉದಾಹರಣೆಗೆ ಕೆಳಗೆ ಉದ್ಧರಿಸಿದ ಸಂಪಾದಕೀಯಗಳನ್ನು ನೋಡಿ.

## 19.3.1 ಸಮಾಜದಲ್ಲಿಯ ಅನ್ಯಾಯಗಳನ್ನು ಕುರಿತು :

ಸಮಾಜದಲ್ಲಿ ಮಹಿಳೆಯರ ಬಗ್ಗೆ ನಡೆಯುತ್ತಿರುವ ಅನ್ಯಾಯಗಳನ್ನು ಕುರಿತು ಒಂದು ಸಂಪಾದಕೀಯ ನೋಡಿ.

**ಮಹಿಳೆ - ಜಾರಿಗೆ ಬರದ ಕಾನೂನು**

ಹೆಣ್ಣನ್ನು ದೇವತೆಯೆಂದೋ ಅಥವಾ ಕಾಮದ ಗೊಂಬೆಯೆಂದೋ ಎರಡು ಅತಿಗಳಲ್ಲಿ ಕಾಣುವ ನಮ್ಮ ಪುರುಷ ಪ್ರಧಾನ ಸಮಾಜ ಆಕೆಯನ್ನು ಮಾನಿನಿಯೆಂದು ಪರಿಗಣಿಸಿ ಗೌರವದಿಂದ ನಡೆಸಿಕೊಳ್ಳುವುದು ವಿರಳ ಎಂಬುದು ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳಿಂದ ಸ್ಪಷ್ಟ. ದಿನ ಬೆಳಗಾದರೆ ಮಹಿಳೆಯ ಶೀಲಭಂಗ, ವರದಕ್ಷಿಣೆ ತರದಿದ್ದಕ್ಕಾಗಿ ಜೀವಂತ ದಹನ, ಅನೈತಿಕ ಉದ್ದೇಶಗಳಿಗಾಗಿ ಅಪಹರಣ — ಇಂಥ ಪ್ರಕರಣಗಳು ಹೆಚ್ಚುತ್ತಿದ್ದು ಸಂಗದೇವರ ಕೊಪ್ಪ ಗ್ರಾಮದ ಐವರು ಜಗಳವಾಡಿದ ಕ್ಷುಲ್ಲಕ ಕಾರಣಕ್ಕಾಗಿ ಮಹಿಳೆಯೊಬ್ಬಳನ್ನು ವಿವಸ್ತ್ರಗೊಳಿಸಿ ಕಂಬಕ್ಕೆ ಕಟ್ಟಿ ತಲೆಯ ಮೇಲೆ ತಣ್ಣೀರು ಸುರಿಯುವ ಶಿಕ್ಷೆ ವಿಧಿಸಿದ್ದಾರೆಂದು ವರದಿಯಾಗಿದೆ. ಹೆಣ್ಣಿನ ಮೇಲಿನ ಇಂಥ ದೌರ್ಜನ್ಯಗಳು ಒಂದು ರಾಜ್ಯ ಅಥವಾ ಪ್ರದೇಶಕ್ಕೆ ಸೀಮಿತವಾಗಿರದೆ ರಾಷ್ಟ್ರವ್ಯಾಪ್ತಿಯಾಗಿದ್ದು ಇನ್ನೂ ಉಗ್ರ ಸ್ವರೂಪದ್ದಾಗಿವೆ.

ಇಂಥ ದೌರ್ಜನ್ಯಗಳಿಂದ ಮಹಿಳೆಯನ್ನು ರಕ್ಷಿಸಲು ಸಂಸತ್ ಹಲವಾರು ಶಾಸನಗಳನ್ನು ರೂಪಿಸಿದೆ. ಜೊತೆಗೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಕೆಲವೊಂದು ಆದೇಶಗಳನ್ನೂ ನೀಡಿದೆ. ಆದರೆ ಇದಾವುದನ್ನೂ ಸಮರ್ಪಕವಾಗಿ ಜಾರಿಗೆ ತಂದಿಲ್ಲ ಎಂಬುದಕ್ಕೆ "ಅಬಲೆ" ಯ ಮೇಲೆ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿರುವುದೇ ಸಾಕ್ಷಿ. ಹೆಚ್ಚು ವರದಕ್ಷಿಣೆ ತರದಿದ್ದಕ್ಕೆ ಜೀವಂತ ಸುಟ್ಟ ಅಥವಾ ಹಿಂಸೆಕೊಟ್ಟ ದೂರುಗಳಂತೂ ಪ್ರತಿನಿತ್ಯ ವರದಿಯಾಗುತ್ತಿವೆ. ಕೇಂದ್ರ ಗೃಹಸಚಿವ ಶಾಖೆಯ ವರದಿ ಪ್ರಕಾರ 1985ರಲ್ಲಿ ರಾಷ್ಟ್ರದಲ್ಲಿ 6356 ಮಹಿಳೆಯರ ಶೀಲಭಂಗ ಪ್ರಕರಣಗಳು, 8440 ಮಹಿಳೆಯರ ಅಪಹರಣ ಹಾಗೂ 837 ವಧುಗಳ ದಹನ ನಡೆದಿದೆ. ನಂತರದ ವರ್ಷಗಳಲ್ಲಂತೂ ಈ ಬರ್ಬರ ಕೃತ್ಯಗಳು ಏರುಮುಖವಾಗಿಯೇ ಇವೆ. 1985ರ ಅಂಕಿ ಅಂಶಗಳ ವಧುದಹನದಲ್ಲಿ ಉತ್ತರ ಪ್ರದೇಶ (323), ಮಹಿಳೆಯರ ಅಪಹರಣದಲ್ಲಿ ರಾಜಸ್ಥಾನ (1459) ಮತ್ತು ಹೆಣ್ಣಿನ ಶೀಲಭಂಗದಲ್ಲಿ ಮಧ್ಯಪ್ರದೇಶ (1428) ಅಗ್ರಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಪ್ರತಿ ಹದಿನೈದು ಗಂಟೆಗೊಂದು ಮಾನಭಂಗ ಯತ್ನ ನಡೆಯುತ್ತದೆಂದು ಎರಡು ವರ್ಷಗಳ ಹಿಂದೆ ಒಂದು ಅಂದಾಜು ತಿಳಿಸಿತ್ತು. ವರದಕ್ಷಿಣೆ ನಿಷೇಧ ಕಾನೂನಿನ ಅನ್ವಯ ವರದಕ್ಷಿಣೆ ನಿಷೇಧನಾ ಅಧಿಕಾರಿಗಳಿಗೆ ಸಹಾಯ ಮಾಡಲು ಸಲಹಾ ಮಂಡಳಿಗಳನ್ನು ನೇಮಿಸಬೇಕು. ಬಹುತೇಕ ರಾಜ್ಯಗಳು ಇಂಥ ಸಲಹಾ ಮಂಡಳಿಗಳನ್ನು ನೇಮಿಸಬೇಕು. ಬಹುತೇಕ ರಾಜ್ಯಗಳು ಇಂಥ ಸಲಹಾ ಮಂಡಳಿಗಳನ್ನೇ ನೇಮಿಸಿಲ್ಲ ಎಂಬುದು ಈ ಜ್ವಲಂತ ಸಮಸ್ಯೆ ಬಗೆಗಿನ ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಇದೇನು ಉದಾಸೀನವೋ ಅಥವಾ ಉದ್ದೇಶ ಪೂರ್ವಕ ನಿಷ್ಕ್ರಿಯತೆಯೋ? ವಿವಾಹಿತ ತರುಣಿಯರ ಮೃತದೇಹದ ಅಂತ್ಯ ಸಂಸ್ಕಾರಕ್ಕೆ ಪೋಲೀಸ್ ಇಲಾಖೆಯಿಂದ ಆಕ್ಷೇಪಣಾರಹಿತ ಪತ್ರ ತರುವವರೆಗೆ ಅನುಮತಿ ನೀಡಬಾರದೆಂದು ಕೇಂದ್ರ ಗೃಹ ಇಲಾಖೆ ನೀಡಿರುವ ಇನ್ನೊಂದು ಆದೇಶವನ್ನೂ ಬಹುತೇಕ ರಾಜ್ಯಗಳಲ್ಲಿ ಪಾಲಿಸಲಾಗುತ್ತಿಲ್ಲವೆಂದೂ ವರದಿಯಾಗಿದೆ. ವಧು ದಹನದ ಮೊಕದ್ದಮೆಗಳು ಬೇಗ ಇತ್ಯರ್ಥವಾಗುತ್ತಿಲ್ಲ ಹಾಗೂ ಆರೋಪ ಸಿದ್ಧವಾದಾಗ ನ್ಯಾಯಾಲಯಗಳು ಅಪರಾಧಿಗಳಿಗೆ ಉಗ್ರ ಶಿಕ್ಷೆ ವಿಧಿಸುತ್ತಿಲ್ಲ. ಇವೆಲ್ಲದರಿಂದ ವರದಕ್ಷಿಣೆಯಂಥ ಸಾಮಾಜಿಕ ಪಿಡುಗಿನ ಬಗ್ಗೆ ಅಧಿಕಾರಸ್ಥರ ನೈತಿಕ ಕಾಳಜಿಯನ್ನೇ ಪ್ರಶ್ನಿಸುವಂತಾಗುತ್ತದೆ. ಅನೈತಿಕ ಉದ್ದೇಶಗಳಿಗೆ ಅಂತರ ರಾಜ್ಯ ವ್ಯಾಪ್ತಿಯ ಮಹಿಳೆಯರ ಅಪಹರಣ ಪ್ರಕರಣಗಳ ತನಿಖೆಗಾಗಿ ವಿಶೇಷ ನ್ಯಾಯಾಲಯಗಳನ್ನು ರಚಿಸಬೇಕೆಂಬ ಸಲಹೆಯನ್ನೂ ಅನೇಕ ರಾಜ್ಯಗಳು ಕಾರ್ಯಗತ ಮಾಡಿಲ್ಲ. ಕರ್ತವ್ಯ ಲೋಪಗಳನ್ನು ನೋಡಿದರೆ ಮಹಿಳೆ ಕುರಿತು ನಮ್ಮ ಮೂಲಭೂತ ದೃಷ್ಟಿಯಲ್ಲೇ ಏನೋ ದೋಷವಿದೆ ಎನಿಸುತ್ತದೆ. ಮಹಿಳೆ ಬಗೆಗಿನ ಆಕೆ ತನಗಿಂತ ಕೀಳು ಎಂಬ ಮನೋಭಾವ, ಹೆಣ್ಣಿನ ಮೇಲಿನ ದೌರ್ಜನ್ಯದಿಂದ ಪಡೆಯುವ ಹಿಂಸಾನಂದ ಪ್ರವೃತ್ತಿಗಳು ತೊಲಗಲು ಸೂಕ್ತ ಶಿಕ್ಷಣ ಅಗತ್ಯವಿದೆ. ಈ ಮನೋಭಾವ ಹೋದಾಗ ಮಹಿಳೆಯರ ಬಗ್ಗೆ ಅಧಿಕಾರಸ್ಥರ ನಿಲುವಿನಲ್ಲೂ ಬದಲಾವಣೆಯಾದೀತು. ಮಹಿಳೆಯರ ರಕ್ಷಣೆಗಾಗಿ, ಮಹಿಳೆಯರನ್ನು ಸಮಾನಸ್ಕಂಧರಾಗಿ ಕಾಣುವಂಥ ಮನೋಭಾವ ರೂಪಿಸಲು ಸರ್ಕಾರ ಸಂಕಲ್ಪ ಮಾಡಬೇಕು. ಮಹಿಳಾಪರ ಕಾನೂನು ಕ್ರಮಗಳನ್ನು ಜಾರಿಗೆ ತರಲು ಯಾವ ನೆಪವೂ ಅಡ್ಡಿ ಬರಬಾರದು. ಬಂದರೆ ಅದು ಅಕ್ಷಮ್ಯ.

(ಪ್ರಜಾವಾಣಿ, ದಿನಾಂಕ 23.2.88ರ ಸಂಪಾದಕೀಯದ)

ಇಲ್ಲಿ ಸ್ತ್ರೀಯರ ಬಗ್ಗೆ ನಮ್ಮ ಸಮಾಜವು ಮಾಡುತ್ತಿರುವ ಅನ್ಯಾಯಗಳನ್ನು ಎತ್ತಿತೋರಿಸಲಾಗಿದೆ. ಮಹಿಳೆಯರ ಬಗೆಗಿನ ಅನ್ಯಾಯಗಳನ್ನು ಸರಿಪಡಿಸಲು ಸರಕಾರ ಯಾವ ಯಾವ ಕಾನೂನುಗಳನ್ನು ಮಾಡಬೇಕು, ಏನೇನು ಸೌಲಭ್ಯಗಳನ್ನು ಕಲ್ಪಿಸಬೇಕು ಎಂಬ ಬಗ್ಗೆ ಖಾರವಾಗಿ ಹೇಳಲಾಗಿದೆ.

# ಅಭ್ಯಾಸ - 1

(1) ಮೇಲಿನ ಸಂಪಾದಕೀಯವು ಕೆಳಗಿನವುಗಳಲ್ಲಿ ಯಾವ ವಿಷಯದ ಬಗ್ಗೆ ಇದೆ ಗುರುತಿಸಿರಿ. ( ✓ ) ಹೀಗೆ ಗುರುತಿಸಿರಿ.

(ಅ) ಅನ್ಯಾಯಗಳನ್ನು ಎದುರಿಸಲು ಮಹಿಳೆಯರಿಗೆ ಎಚ್ಚರಿಕೆ.

(ಆ) ಸಮಾಜದ ಎಲ್ಲ ರಂಗದಲ್ಲಿ ಆದಂತೆ ಮಹಿಳೆಯರ ಬಗೆಗೂ ಅನ್ಯಾಯವಾಗುವುದು ಸ್ವಾಭಾವಿಕ.

(ಇ) ವರದಕ್ಷಿಣೆಯ ನೆಪದಲ್ಲಿ ಆಗುತ್ತಿರುವ ಅನ್ಯಾಯಗಳ ಅಂಕೆ ಸಂಖ್ಯೆಯನ್ನು ನೀಡುವುದು.

(ಈ) ಮಹಿಳೆಯರ ಬಗ್ಗೆ ಆಗುತ್ತಿರುವ ಅನ್ಯಾಯದಿಂದ ಅವರಿಗೆ ರಕ್ಷಣೆ ಕೊಡಲು ಕಾನೂನುಗಳು ಬರಬೇಕಾದ ಅಗತ್ಯವಿದೆ.

(2) ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ.

(ಅ) ಮಹಿಳೆಯರ ಬಗೆಗೆ ನಡೆಯುತ್ತಿರುವ ಅನ್ಯಾಯಗಳು ಯಾವುವು?

..............................................................................................................

..............................................................................................................

(ಆ) ಅಬಲೆಯರ ಮೇಲೆ ದಿನೇ ದಿನೇ ಯಾವ ರೀತಿಯಲ್ಲಿ ಅನ್ಯಾಯಗಳು ಹೆಚ್ಚುತ್ತಿವೆ?

..............................................................................................................

..............................................................................................................

ಸರಕಾರಗಳು ಸಾಮಾಜಿಕ ಪಿಡುಗನ್ನು ನಿವಾರಿಸಲು ಹೇಗೆ ಪ್ರಯತ್ನಿಸುತ್ತಿವೆ?

..............................................................................................................

..............................................................................................................

ಸರಕಾರ ಯಾವ ಸಂಕಲ್ಪ ಮಾಡಬೇಕು?

..............................................................................................................

..............................................................................................................

(3) ಕೆಳಗಿನ ಗುಂಪುಗಳಲ್ಲಿಯ ಪದಗಳು ಹೆಚ್ಚು ಕಡಿಮೆ ಒಂದೇ ಅರ್ಥವನ್ನು ಸೂಚಿಸುತ್ತಿದ್ದರೂ, ಆ ಪದಗಳಿಗೆ ವಿಶಿಷ್ಟ ಅರ್ಥಗಳಿವೆ. ಆ ಅರ್ಥಗಳನ್ನು ವಿವರಿಸಿರಿ.

(ಅ) ಹೆಣ್ಣು, ಮಹಿಳೆ, ಮಾನಿನಿ, ಅಬಲೆ, ತರುಣಿ

..............................................................................................................

..............................................................................................................

..............................................................................................................

(ಆ) ದೌರ್ಜನ್ಯ, ಅನ್ಯಾಯ, ಅತ್ಯಾಚಾರ, ಮಾನಭಂಗ

..............................................................................................................

..............................................................................................................

..............................................................................................................

(ಇ) ಕಾಯಿದೆ, ಕಾನೂನು, ಶಾಸನ

..............................................................................................................

..............................................................................................................

..............................................................................................................

(4) ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು, ನಿಮ್ಮ ವಿಚಾರಗಳನ್ನು ಅಗ್ರಲೇಖದ ರೂಪದಲ್ಲಿ ಬರೆಯಿರಿ.

(ಅ) ದಲಿತರ ಮೇಲೆ ದೌರ್ಜನ್ಯ.

(ಆ) ಕಾರ್ಮಿಕರ ಶೋಷಣೆ

(ಇ) ಸಾಲಗಾರರ ಕೈಯಲ್ಲಿ ಸಿಕ್ಕ ಬಡಜನರ ಗೋಳು

(ಈ) ಭ್ರಷ್ಟಾಚಾರದಿಂದ ಸಮಾಜಕ್ಕೆ ಆದ ಧಕ್ಕೆ

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

## 19.3.2 ಗಣ್ಯ ವ್ಯಕ್ತಿಗಳ ಆದರ್ಶವನ್ನು ಕುರಿತು

ಕೆಳಗೆ ಉದ್ಧರಿಸಿದ ಸಂಪಾದಕೀಯದಲ್ಲಿ ನಮ್ಮ ತಲೆಮಾರಿನಲ್ಲಿಯೇ ಆಗಿ ಹೋದ ಒಬ್ಬ ಧೀರ, ಉದಾತ್ತ ವ್ಯಕ್ತಿಯು ಕಣ್ಮರೆಯಾದಾಗ ಉಕ್ಕಿಬಂದ ನೆನಪುಗಳನ್ನು, ಭಾವನೆಗಳನ್ನು ಸಂಗ್ರಹಿಸಲಾಗಿದೆ. ಅದು ಗಡಿನಾಡ ಗಾಂಧಿಯೆಂದು ಖ್ಯಾತರಾಗಿದ್ದ ಖಾನ್ ಅಬ್ದುಲ್ ಗಫಾರ್ ಖಾನ್ ಅವರ ಬಗ್ಗೆ

**ಮೇರು ಪುರುಷ**

ದಿಗ್ಗಜ ಸಮಾನ ವ್ಯಕ್ತಿ, ಮೇರು ಪುರುಷ, ಗಾಂಧೀಜಿಯ ದಾರಿಗೆ ಒಲಿದುಬಂದ ಸಿಂಹ ಸದೃಶ ನಾಯಕ, ಪಠಾಣರು ಗುಂಡಿಗೆ ಒಲಿದಿದ್ದ ಜನ. ಶಸ್ತ್ರಗಳ ಆರಾಧಕರು, ಅವರನ್ನೆಲ್ಲ ಅಹಿಂಸೆಯ ಅಮೂಲ್ಯ ಹಾದಿಗೆ ತಂದ ವಿಕ್ರಮ ಖಾನ್ ಅಬ್ದುಲ್ ಗಫಾರ್ ಖಾನ್ ಅವರದು.

ಒಡೆದು ಆಳಿದರು ಭಾರತವನ್ನು ಬ್ರಿಟಿಷರು, ಧರ್ಮ ಹೃದಯಗಳನ್ನು ಬೆಳೆಯುವ ಶಕ್ತಿ; ಮನುಷ್ಯ ಮನುಷ್ಯರ ನಡುವೆ ಅಡ್ಡಗೋಡೆಗಳಾದುವು. ಹಿಂದೂಗಳೇ ಬೇರೆ, ಮುಸ್ಲಿಮರೇ ಬೇರೆ, ಅನ್ಯ ಧರ್ಮೀಯರೇ ಬೇರೆ. ಹೀಗೆ ಹೋಳು ಹೋಳಾಗಿ ಮಾಡಿಬಿಟ್ಟರು. ತಮ್ಮ ಸಾಮ್ರಾಜ್ಯಶಾಹಿ ಶಾಶ್ವತವಾಗಿ ಇರಲೆಂದು ಹೂಡಿದ ಹವಣಿಕೆ.

ಹುಡಿ ಹುಡಿಯಾಗಿದ್ದ ಭಾರತೀಯರು ಹುರಿಗೊಂಡರು ಬಾಪೂ ನೇತೃತ್ವದಲ್ಲಿ, ವಾಯವ್ಯ ಗಡಿನಾಡು ವಿಕ್ರಮವನ್ನೇ ಮೆರೆಸಿತು. ಇಬ್ಬರು ಸೋದರರು ಪವಾಡ ನಡೆಸಿದರು. ಡಾ. ಖಾನ್ ಸಾಹೇಬ್ ಮತ್ತು ಖಾನ್ ಅಬ್ದುಲ್ ಗಫಾರ್ ಖಾನ್, ಮುಸ್ಲಿಂ ಬಹುಸಂಖ್ಯಾತ ರಾಜ್ಯಗಳು ಬೇರೆ ರೀತಿ ನಡೆದುಕೊಂಡಾಗ ವಾಯವ್ಯ ಗಡಿನಾಡು ಪ್ರಾಂತ ಕಾಂಗ್ರೆಸ್ಸಿನ ಭದ್ರಕೊತ್ತಲ, ಇದರ ಶ್ರೇಯಸ್ಸೆಲ್ಲ ಖಾನ್ ಅಬ್ದುಲ್ ಖಾನ್ ಅವರದು.

ಬ್ರಿಟಿಷ್ ಸಾಮ್ರಾಜ್ಯಶಾಹಿ ಪಠಾಣರ ಸಂಘಟನೆಯ ಎದುರು ತತ್ತರಿಸಿತು. ಬಾದ್‌ಷಹಾ ಖಾನ್ ಕಟ್ಟಿದ ಕೆಂಪಂಗಿ ದಳ ಗಾಂಧೀಜಿಯ ಸತ್ಯಾಗ್ರಹೀ ಪಡೆಯ ಮುಂಚೂಣಿ, ಸ್ವಯಂಸೇವಕರಿಗೆಲ್ಲ ಮಾದರಿ. ಆ ಪಡೆಗೆ ಗಡಿನಾಡ ಗಾಂಧೀ ಇಟ್ಟ ಹೆಸರು ''ಖುದಾ-ಇ-ಖಿದ್ಮತ್‌ಗಾರ್'' — ದೇವರ ಸೇವಕರು. ಗಫಾರ್ ಖಾನರಿಗೆ ಯಾವ ಬಗೆಯ ಜಾತಿಯ ನಂಜೂ ಇರಲಿಲ್ಲ. ಅತಿ ಶ್ರೇಷ್ಠ ಅರ್ಥದಲ್ಲಿ ಅವರೊಬ್ಬ ನಿಷ್ಠಾವಂತ ಮುಸ್ಲಿಂ, ಅವರ ಇಸ್ಲಾಂ ಧರ್ಮದ ನಂಬಿಕೆ ಅತಿ ವಿಶಾಲ, ಅವರ ಹೃದಯವೂ ಅಷ್ಟೇ ವಿಶಾಲ.

ಇಡೀ ರಾಷ್ಟ್ರೀಯ ಚಳವಳಿ ದೇಶವನ್ನೇ ಆವರಿಸಿದಾಗ ಪಠಾಣರು ಅಪಸ್ವರ ಎತ್ತಲಿಲ್ಲ. ಮಹಮದ್ ಆಲೀ ಜಿನ್ನಾ ಸಾಹೇಬರು ಹರಿಬಿಟ್ಟ ದ್ವಿರಾಷ್ಟ್ರ ತತ್ವಕ್ಕೆ ಮಣಿಯಲಿಲ್ಲ. ಧರ್ಮಗಳು ಬೇರೆ ಆದರೇನಂತೆ? ದೇಶವೆಲ್ಲ ಒಂದೇ. ಇಂಥ ರಾಷ್ಟ್ರೀಯ ಧರ್ಮವನ್ನು ಮುಗಿಲೆತ್ತರಕ್ಕೆ ಎತ್ತಿ ಹಿಡಿದ ಮೇರು ಸದೃಶ ವ್ಯಕ್ತಿ ಗಫಾರ್ ಖಾನ್.

ವಾಯವ್ಯ ಸರಹದ್ ಪ್ರಾಂತದ ಪಠಾಣರು ಲಷ್ಕರೀ ಗುಣಗಳುಳ್ಳ ಯೋಧರ ಸಮುದಾಯ, ಹಿಂಸಾತ್ಮಕ ವರ್ತನೆಗೆ ಪಠಾಣರು ತವರು ಮನೆ ಇದ್ದಂತೆ. ಅಂಥವರು ಗಾಂಧೀಜಿಯ ಅಹಿಂಸೆಯನ್ನೂ ಕೇವಲ ತಂತ್ರವಾಗಿ ಸ್ವೀಕರಿಸಲಿಲ್ಲ. ಜೀವನ ಧರ್ಮವಾಗಿ ಅಪ್ಪಿಕೊಂಡರು. ಬ್ರಿಟಿಷರನ್ನು ದ್ವೇಷಿಸಲಿಲ್ಲ. ಬ್ರಿಟಿಷ್ ಆಡಳಿತದ ಕಡು ವಿರೋಧಿಗಳು.

ಮುಸ್ಲಿಂ ಸಂಪ್ರದಾಯವಾದಿಗಳು ಅವರನ್ನು 'ದೇಶದ್ರೋಹಿ' ಎಂದು ಕರೆದರು. ಪಾಕಿಸ್ತಾನೀ ಆಳರಸರು ಬಗೆಬಗೆಯ ದೂಷಣೆಗೆ ಗುರಿ ಮಾಡಿದರು. ಮಹಮದಲೀ ಜಿನ್ನಾ ಅವರು ಗಫಾರ್ ಖಾನ್ ಅವರನ್ನು ''ಹಿಂದೂ ಏಜೆಂಟ್'' ಎಂದು ಹಳಿದರು. ಪಾಕಿಸ್ತಾನದ ಮೊದಲ 17 ವರ್ಷಗಳಲ್ಲಿ 15 ವರ್ಷ ಕಾಲ ಖಾನ್ ಅಬ್ದುಲ್ ಗಫಾರ್ ಖಾನರಿಗೆ ಸೆರೆಮನೆಯೇ ವಾಸಸ್ಥಾನ ಆಯಿತು. ಅತಿ ವಿಚಿತ್ರ, ಬ್ರಿಟಿಷರೊಡನೆ 28 ವರ್ಷ ಕಾಲ ಹೋರಾಡಿದರು. ಆದರೆ ಕಾರಾಗೃಹವಾಸ ಅನುಭವಿಸಿದ್ದು 14 ವರ್ಷ ಮಾತ್ರ.

ಈ ಯಮ ಮಾತನೆಯೆಲ್ಲ ಅವರ ದೃಢ ಮನಸ್ಸನ್ನು ಸೋಲಿಸಲಾಗಲಿಲ್ಲ. ತಮ್ಮ ರಾಜಕೀಯ ಸಂಘರ್ಷದ ವಿಷಯದಲ್ಲಿ ಸೋಲನ್ನೇ ಸ್ವೀಕರಿಸಲಿಲ್ಲ. ಭಾರತದ ವಿಭಜನೆಯ ವಿಷಯದಲ್ಲಿ ಯಾವುದೇ ಬಗೆಯ ಅಳ್ಳೆದೆಯನ್ನು. ಅವರು ತಳೆಯಲಿಲ್ಲ. ಭಾರತವನ್ನು ಹೋಳುಮಾಡಿ ಸ್ವರಾಜ್ಯ ನೀಡಿದ ಬ್ರಿಟಿಷರ ಕುತಂತ್ರಕ್ಕೆ ಅವರು ಮಣಿಯಲೇ ಇಲ್ಲ.

**ಅತಿ ಶ್ರೇಷ್ಠ**

ಖಾನ್ ಅಬ್ದುಲ್ ಗಫಾರ್ ಖಾನ್ ಗಾಂಧೀಜಿಯನ್ನು ಬಿಟ್ಟರೆ ಅತಿ ಶ್ರೇಷ್ಠ ಸತ್ಯಾಗ್ರಹಿ. ಒಮ್ಮೆ ಮೈಸೂರಿನ ಸಾರ್ವಜನಿಕ ಸಭೆಯಲ್ಲಿ "ಜೀವಂತವಿರುವ ಅತಿ ಶ್ರೇಷ್ಠ ಸತ್ಯಾಗ್ರಹಿ" ಎಂದು ಡಾ.ರಾಮ ಮನೋಹರ ಲೋಹಿಯಾ ಬಣ್ಣಿಸಿದುದು ದಿಟ. ಗಾಂಧೀಜೀಯ ಅಹಿಂಸಾ ಪಥವನ್ನು, ಹೋರಾಟದ ಅಸ್ತ್ರವನ್ನು ಅದ್ವಿತೀಯವಾಗಿ ಮೆರೆಸಿದರು ಬಾದ್‌ಷಹಾ ಖಾನ್, ಅವರ ಸರಳತೆ ಸಜ್ಜನಿಕೆ ಲೋಕೋತ್ತರ.

ಭಾರತಕ್ಕೆ ಬಂದಾಗಲೆಲ್ಲ ಬಾಪೂವಿನ ನೆನಪು, ಸ್ವಾತಂತ್ರ್ಯ ಸಂಗ್ರಾಮದ ದಿನಗಳ ಚಿಂತನೆ, ಆಗಿನ ಕಾಲದ ಹೋರಾಟದ ಸ್ಫೂರ್ತಿಯ ಸಂಸ್ಮರಣೆ. ಗಫಾರ್ ಖಾನ್ ಎಲ್ಲ ಅರ್ಥದಲ್ಲೂ ಗಾಂಧೀಜೀಯ ಅವಿಚ್ಛಿನ್ನ ಅನುಯಾಯಿ. ಬಿಹಾರದಲ್ಲಿ ನಡೆದ ರಕ್ತದ ಓಕುಳಿ, ಸೋದರ ಸೋದರರನ್ನು ಆಹುತಿ ಥಾವಿಸಿಕೊಂಡ ರುದ್ರಕಾಂಡ, ಗಫಾರ್ ಖಾನ್ ಜವಾಹರಲಾಲರೊಡನೆ ಅಲ್ಲಿ ಧಾವಿಸಿದರು. ಹುಚ್ಚೆದ್ದ ಜನರನ್ನು ವಿವೇಕಕ್ಕೆ ಹಚ್ಚಿದರು.

ಸ್ವತಂತ್ರ ಭಾರತದಲ್ಲಿ ಅಹಮದಾಬಾದ್ ನಗರದಲ್ಲಿ ಕೋಮು ಗಲಭೆ. ಅದನ್ನು ಕಂಡು ಗಫಾರ್ ಖಾನರಿಗೆ ಮರುಕವೋ ಮರುಕ. ಗಾಂಧೀಜಿಯ ಭಾರತ, ಗಾಂಧೀಯ· ತವರುಮನೆಯ ರಾಜಧಾನಿ ಮತೀಯ ದ್ವೇಷದ ದಳ್ಳುರಿಯಾದುದಕ್ಕೆ ಅವರಿಗಾದಷ್ಟು ವೇದನೆ ಬಹುಶ: ಮತ್ತಾರಿಗೂ ಆಗಿರಲಿಕ್ಕಿಲ್ಲ.

ಇಳಿವಯಸ್ಸಿನಲ್ಲಿ ಗಫಾರ್ ಖಾನ್ ಅತ್ಯುತ್ತಮ ಚಿಕಿತ್ಸೆಗಾಗಿ ಭಾರತಕ್ಕೆ ಬಂದರು. ಮನುಷ್ಯ ಪ್ರಯತ್ನ ಮಾಡಬಹುದಾದುದನ್ನೆಲ್ಲ ಮಾಡಿಯಾಯಿತು. ವಿಧಿನಿಯಮಕ್ಕೆ ಯಾರು ಅಡ್ಡಿ? ಗಡಿನಾಡ ಗಾಂಧೀ ಅವರ ಮಣ್ಣಿನ ಮೈ ಈಗ ಮಣ್ಣಿನಲ್ಲಿ ವಿಲೀನ, ಅವರ ಸಾಧನೆಗೆ ಸಾವಿಲ್ಲ. ಅವರು ಮೆರೆದ ಪರಾಕ್ರಮಕ್ಕೆ ಎಂದೂ ಅಳಿವಿಲ್ಲ.

(ಕನ್ನಡ ಪ್ರಭ, ದಿನಾಂಕ 21.1.1988 ರ ಸಂಪಾದಕೀಯದಿಂದ ಆಯ್ದ ಭಾಗ.)

ಮೇಲಿನ ಅಗ್ರಲೇಖದಲ್ಲಿ ಖಾನ್ ಅಬ್ದುಲ್ ಗಫಾರ್ ಖಾನ್ ಅವರ ಬಗ್ಗೆ, ಅವರ ನಿಧನದ ಸಮಯದಲ್ಲಿ ಬರೆಯಲಾಗಿದೆ. ಜಾತಿಯಿಂದ ಪಠಾಣರಾಗಿದ್ದರೂ, ಹಿಂಸೆಯೆಂಬುದು ಪಠಾಣರ ನರದಲ್ಲಿ ಹರಿಯುವ ರಕ್ತದಂತೆ ಇದ್ದರೂ ಗಫಾರ್ ಖಾನ್ ಗಾಂಧೀಜಿಯ ಪ್ರಭಾವದಲ್ಲಿ ಒಂದು ಹೋರಾಟದ ಅಹಿಂಸಾವಾದಿಯಾದರು. ಸೆರೆಮನೆಗೆ ಹೋದರು. ಸ್ವಾತಂತ್ರ್ಯ ಹೋರಾಟದ ಅಗ್ರಸೇನಾನಿಯಾದರು. ಅಂಥ ವ್ಯಕ್ತಿಯನ್ನು 'ಮೇರು ಪುರುಷ' ಎಂದು ಕರೆದುದು ಸಾರ್ಥಕವಾಗಿದೆ.

# ಅಭ್ಯಾಸ - 2

(1) ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ. ಗೊತ್ತಿಲ್ಲದ ಪದಗಳ ಅರ್ಥಗಳನ್ನು ಶಬ್ದಕೋಶ ನೋಡಿ ತಿಳಿದುಕೊಳ್ಳಿರಿ.

ದಿಗ್ಗಜ .......................................... ,ಬಹುಸಂಖ್ಯಾತ ..........................
ಕೊತ್ತಲ .......................................... ,ಮುಂಚೂಣಿ ..........................
ಸರಹದ್ .......................................... ,ಯಮಯಾತನೆ ..........................
ವಿಭಜನೆ .......................................... ,ಅಳ್ಳೆದೆ ..........................
ಅವಿಚ್ಛಿನ್ನ .......................................... ,ಸಂಘರ್ಷ ..........................

(2) ಕೆಳಗಿನ ಪದಗಳ ಅರ್ಥವನ್ನು ನಾಲ್ಕಾರು ಮಾತುಗಳಲ್ಲಿ ವಿವರಿಸಿರಿ.
ಒಡೆದು ಆಳು, ಚಳವಳಿ, ಅಪಸ್ವರ ಮತ್ತು ಲಷ್ಕರೀ ಗುಣಗಳು, ಅದ್ವಿತೀಯವಾಗಿ, ರಕ್ತದ ಓಕುಳಿ.

..........................................................................................
..........................................................................................
..........................................................................................
..........................................................................................
..........................................................................................
..........................................................................................

(3) ಈ ಅಗ್ರಲೇಖದಲ್ಲಿ ಅನೇಕ ವ್ಯಾಗಳಿಗೆ ಕ್ರಿಯಾಪದವೆಂಬುದಿಲ್ಲವಿ ಆದರೀ ಆ ವಾಕ್ಯಗಳು ಸ್ವಾಭಾವಿಕವೆಂದೇ ಅನಿಸುತ್ತದೆ. ಅಂದರೆ ಅವುಗಳಲ್ಲಿ ಒಂದಿಲ್ಲೊಂದು ಕ್ರಿಯಾಪದದ ಗುಪ್ತವಾಗಿ ಇರುತ್ತದೆ ಎಂದರ್ಥ. ಉದಾಹರಣೆಗೆ

"ತಮ್ಮ ಸಾಮ್ರಾಜ್ಯಶಾಹಿ ಶಾಶ್ವತವಾಗಿ ಹೂಡಿದ ಹವಣಿಕೆ' ಈ ವಾಕ್ಯದಲ್ಲಿ "....... ಇದು ಆಗಿರುತ್ತದೆ." ಎಂಬ ಪದಗಳನ್ನು ಸೇರಿಸಿಕೊಂಡಾಗ ವಾಕ್ಯ ಪೂರ್ತಿಯಾಯಿತೆಂದು ಅನ್ನಿಸುತ್ತದೆ. ಇದೇ ರೀತಿಯ ವಾಕ್ಯಗಳನ್ನು ಸಂಗ್ರಹಿಸಿ. ಹೇಗೆ ಅವು ವಾಕ್ಯಗಳಾಗುತ್ತವೆ ಎಂಬುದನ್ನು ತೋರಿಸಿರಿ.

..............................................................................................................

..............................................................................................................

..............................................................................................................

..............................................................................................................

..............................................................................................................

(4) ಎಲ್ಲಿ ಕ್ರಿಯಾಪದವಿಲ್ಲದೆ ವಾಕ್ಯ ಮಾಡಬಹುದು, ಎಲ್ಲಿ ಕ್ರಿಯಾಪದವನ್ನು ಬಿಡಲು ಆಗುವುದಿಲ್ಲ ಎಂಬುದನ್ನು ಕೆಳಗೆ ತೋರಿಸಿದಂತೆ ವಾಕ್ಯಗಳನ್ನು ಸಂಗ್ರಹಿಸಿರಿ.

ಗೋಪಾಲನು ಒಳ್ಳೆಯ ಹುಡುಗ. (ಇರುತ್ತಾನೆ. ಆಗಿದ್ದಾನೆ)

ಇಲ್ಲಿ ಇರುತ್ತಾನೆ ಅಥವಾ ಆಗಿದ್ದಾನೆ ಎಂಬ ಕ್ರಿಯಾಪದವನ್ನು ಪ್ರಯೋಗಿಸಿದ್ದರೂ ಅವು ವಾಕ್ಯಗಳಾಗುತ್ತವೆ. ಆದರೆ

ರಾಮನು ಹೇಗೆ .............................. ಅಥವಾ

ಗೋವಿಂದನು ಹೂವನ್ನು ................... ಇಷ್ಟೇ ಹೇಳಿದರೆ ವಾಕ್ಯವು ಶುದ್ಧವೆನಿಸುವುದಿಲ್ಲ. ಇವೇ ರೀತಿಯ ವಾಕ್ಯಗಳನ್ನು ಸಂಗ್ರಹಿಸಿರಿ.

..............................................................................................................

..............................................................................................................

..............................................................................................................

..............................................................................................................

ಮೇಲೆ ಉದಾಹರಿಸಿದ ಎರಡೂ ಲೇಖನಗಳನ್ನು ನೋಡಿದಾಗ ಕೆಲವು ಮಾತುಗಳು ಸಾಮಾನ್ಯವಾಗಿ ಗೊತ್ತಾಗುತ್ತದೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು.

(1) ಕಾವ್ಯಾತ್ಮಕ ಶೈಲಿಯ ಉಪಯೋಗ. ಅಂದರೆ ಹೇಳಬೇಕೆಂದಿರುವ ವಿಷಯವನ್ನು ಬಣ್ಣದ ಮಾತಿನಲ್ಲಿ ಹೇಳುವುದು. ಅದರಿಂದ ಹೇಳಬೇಕೆಂದಿರುವ ವಿಷಯ ಶಕ್ತಿಯುತವಾಗುತ್ತದೆ. ಉದಾಹರಣೆಗೆ "ಹಿಂಸಾತ್ಮಕ ವರ್ತನೆಗೆ ಪಠಾಣರ ತವರು ಮನೆ ಇದ್ದಂತೆ" ಎಂಬುದನ್ನು "ಪಠಾಣರು ಹಿಂಸಾತ್ಮಕ ವರ್ತನೆಯವರು" ಎಂದು ಹೇಳಬಹುದಿತ್ತು. ಆದರೆ "ತವರು ಮನೆ ಇದ್ದಂತೆ" ಎಂಬ ಮಾತಿನಿಂದ ಪರಿಣಾಮ ತೀವ್ರವಾಗುತ್ತದೆ. ಶೈಲಿ ಕಾವ್ಯಾತ್ಮಕವಾಗುತ್ತದೆ. ಇದೇ ರೀತಿ "ಗಫಾರ್ ಖಾನರಿಗೆ ಯಾವ ಬಗೆಯ ಜಾತಿಯ ನಂಜೂ ಇರಲಿಲ್ಲ." ಈ ವಾಕ್ಯವನ್ನು ಅಲಂಕಾರವಿಲ್ಲದೇ ಹೇಳಿದ್ದರೆ ಇಷ್ಟು ಪರಿಣಾಮಕಾರಿಯಾಗುತ್ತಿರಲಿಲ್ಲ.

## 19.3.3. ರಾಜಕೀಯ ವಿದ್ಯಾಮಾನಗಳನ್ನು ಕುರಿತು :

ಪತ್ರಿಕೆಗಳು ಸುತ್ತಮುತ್ತಲಿನ ಸುದ್ದಿಯನ್ನು ವರದಿ ಮಾಡುವಂತೆ ಅವುಗಳ ಬಿಸಿಬಿಸಿ ರಾಜಕೀಯದ ಸುದ್ದಿಗಳನ್ನು ಸಂಗ್ರಹಿಸಿ ಕೊಡುತ್ತಿರುತ್ತವೆ. ಪ್ರತಿಯೊಬ್ಬ ಸಾಮಾಜಿಕನೂ ತನ್ನ ಸುತ್ತಮುತ್ತ ನಡೆಯುವ ರಾಜಕೀಯ ವಿದ್ಯಾಮಾನಗಳ ಅರಿವು ಇರಬೇಕಾದುದು ಅಗತ್ಯ. ಅವುಗಳ ಬಗ್ಗೆ ಸಮಾಚಾರವನ್ನು ಕೊಡುವ ಮಾಧ್ಯಮಗಳೇ ವೃತ್ತಪತ್ರಿಕೆಗಳು. ಆ ವಿದ್ಯಮಾನಗಳ ಬಗೆಗೆ ಸರಿಯಾದ ಅಭಿಪ್ರಾಯವನ್ನು ರೂಪಿಸುವುದೂ ಪತ್ರಿಕಾ ಸಂಪಾದಕರ ಕರ್ತವ್ಯವಾಗಿರುತ್ತದೆ. ಇಲ್ಲಿ ಸಂಪಾದಕರು ನಿರ್ದಾಕ್ಷಿಣ್ಯ ಮನಸ್ಸಿನಿಂದ, ಸಮದೃಷ್ಟಿಯಿಂದ ಯಾವುದು ಸರಿ, ಯಾವುದು ತಪ್ಪು ಎಂಬ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ಇದನ್ನು ಮಾಡುವಲ್ಲಿ ಇತ್ತೀಚಿನ ಪತ್ರಿಕಾ ಸಂಪಾದಕರು ಸಮತೋಲನವನ್ನು ಕಾಯ್ದುಕೊಳ್ಳುತ್ತಿರಲಿಲ್ಲ. ಏಕೆಂದರೆ, ಪತ್ರಿಕೆಯು ಆಡಳಿತ ಪಕ್ಷದ ಪರವಾಗಿಯೋ, ವಿರೋಧ ಪಕ್ಷದ ಪರವಾಗಿಯೋ ಇರುತ್ತದೆ. ಇದರಿಂದಾಗಿ ಓದುಗನಿಗೆ ನಿರ್ದಾಕ್ಷಿಣ್ಯ ಮನಸ್ಸಿನ, ಸಮತೋಲನ ಅಭಿಪ್ರಾಯ ಸಿಗುವುದಿಲ್ಲ. ಅನೇಕ ಸಲ ಪತ್ರಿಕೆಯೇ ಯಾವುದೋ ಒಂದು ರಾಜಕೀಯ ಪಕ್ಷದ ಮುಖ ಪತ್ರಿಕೆಯಾಗಿರುತ್ತದೆ. ಹಾಗಿರುವಾಗ ಆ ಪತ್ರಿಕೆಯ ಸಂಪಾದಕೀಯವು ಸಮತೋಲನ ಅಭಿಪ್ರಾಯವನ್ನು ಕೊಡುವುದು ಹೇಗೆ ಸಾಧ್ಯವಾಗುತ್ತದೆ? ಹೀಗಾಗಿ ನಮ್ಮ ನಾಡಿನಲ್ಲಿ ಪತ್ರಿಕಾ ಸಂಪಾದಕರ ನೀತಿ ಸಂಹಿತೆ ಕ್ಷೀಣಿಸುತ್ತಿದೆ ಎಂದು ಅನೇಕ ಸಲ ಅನಿಸುತ್ತದೆ. ಅದೇ ಪ್ರಕಾರ ಆಡಳಿತ ಪಕ್ಷವೂ ಪತ್ರಿಕೆಗಳನ್ನು ಹೇಗೆ ಗೌರವದಿಂದ ಕಾಣಬೇಕೋ ಹಾಗೆ ಕಾಣುತ್ತಿಲ್ಲ. ಕೆಲವೊಂದು ವಿಷಯಗಳು ಸತ್ಯವಿದ್ದರೂ, ಅವುಗಳ ಪ್ರಕಟಣೆಯನ್ನು ಸಹಿಸದಂತೆ ಇರುತ್ತವೆ. ಇಂಥ ಸಂದರ್ಭದಲ್ಲಿ ತಿಕ್ಕಾಟ ಅನಿವಾರ್ಯವಾಗುತ್ತದೆ.

ಕೆಳಗೆ ಉದ್ಧರಿಸಿದ ಒಂದು ಸಂಪಾದಕೀಯವನ್ನು ಓದಿರಿ.

## ಬೇರೆ ಬಗೆ ಇರಲಿ

ಪ್ರಾದೇಶಿಕ ಪಕ್ಷಗಳು ತಮ್ಮ ಚಟುವಟಿಕೆಗಳನ್ನೆಲ್ಲ ಪ್ರದೇಶ ಮಟ್ಟಕ್ಕೇ ಸೀಮಿತಗೊಳಿಸತಕ್ಕದ್ದು. ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಇಂಥ ಪಕ್ಷಗಳಿಗೆ ಅವಕಾಶ ಇರತಕ್ಕದ್ದಲ್ಲ — ಎನ್ನುತ್ತಾರೆ. ಕೇಂದ್ರದ ಮಾಜಿ ಸಚಿವ ಸಿ. ಸುಬ್ರಹ್ಮಣ್ಯಂ. ಸಂಸತ್ತಿನ ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕೆಂದರೆ ಇಂಥ ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ಪಕ್ಷಗಳ ಹೆಸರಿನಲ್ಲಿ ಸ್ಪರ್ಧಿಸಲಿ ಎನ್ನುತ್ತಾರೆ.

ನಮ್ಮ ದೇಶಕ್ಕೆ ಮೂರು ರಾಷ್ಟ್ರೀಯ ಪಕ್ಷಗಳು ಸಾಕು ಎಂಬುದು ಅವರ ಅಭಿಪ್ರಾಯ. ಈಗ ಪ್ರತಿಯೊಬ್ಬ ರಾಜಕೀಯ ಪಟುವೂ ರಾಷ್ಟ್ರೀಯ ಪರ್ಯಾಯ ಕುರಿತು ತಮ್ಮ ತಮ್ಮ ವಿಚಾರ ವ್ಯಕ್ತಪಡಿಸುತ್ತಿರುವುದು ಸರ್ವವಿದಿತ. ಅಧಿಕಾರದಲ್ಲಿರುವ ಕಾಂಗ್ರೆ ಪಕ್ಷಕ್ಕೆ ಪರ್ಯಾಯವಾದ ರಾಷ್ಟ್ರೀಯ ಪಕ್ಷವೊಂದು ಬೇಕು. ಅಂಥ ಪ್ರಬಲ ರಾಷ್ಟ್ರೀಯ ಪರ್ಯಾಯ ಇಲ್ಲದಿರುವುದರಿಂದಲೇ ಅಲ್ಲಲ್ಲಿ ಪ್ರಾದೇಶಿಕ ಪಕ್ಷಗಳು ತಲೆ ಎತ್ತಿವೆ. ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯವಾಗಿ ತಮ್ಮ ತಮ್ಮ ನೆಲೆ ಕಂಡುಕೊಳ್ಳುವುದು ಅತ್ಯಗತ್ಯ

ಸಿ.ಸುಬ್ರಹ್ಮಣ್ಯಂ ಅವರ ವಿಚಾರ ಕುರಿತು ದೇಶವ್ಯಾಪಿ ಚರ್ಚೆ ನಡೆಯುವುದು ಅಗತ್ಯ. ಕಾಂಗ್ರೆ ಪಕ್ಷ ಅಧಿಕಾರದಲ್ಲಿ. ಕಮ್ಯುನಿಸ್ಟ್ ಪಕ್ಷಗಳು ಕನಿಷ್ಠ ಎರಡು ಮೂರು ರಾಜ್ಯಗಳಲ್ಲಾದರೂ ಅಧಿಕಾರದಲ್ಲಿ. ಉಳಿದೆಡೆ ಇತರ ಪಕ್ಷಗಳು. ಕೆಲ ಪ್ರಾದೇಶಿಕ ಪಕ್ಷಗಳು ಕೇಂದ್ರ ಸರಕಾರದ ಮರ್ಜಿಯನ್ನೇ ಕಾಯುತ್ತವೆ. ಅವನುನ್ನ ಪ್ರತಿಪಕ್ಷಗಳ ಸಾಲಿನಲ್ಲಿ ಸೇರಿಸುವುದು ಅನಗತ್ಯ

ನಮ್ಮ ದೇಶದಲ್ಲಿ ಕೆಲವು ಪಕ್ಷಗಳು ಪ್ರಾದೇಶಿಕ ಎನ್ನಿಸಿಕೊಂಡರೂ ಅವು ರಾಷ್ಟ್ರ ವಿರೋಧಿಯೂ ಅಲ್ಲ. ಅರಾಷ್ಟ್ರೀಯವೂ ಅಲ್ಲ. ಅಂಥ ಪಕ್ಷಗಳು ತಮ್ಮ ರಾಷ್ಟ್ರೀಯ ಭೂಮಿಕೆಯೊಂದನ್ನು ಕಂಡುಕೊಳ್ಳುವುದು ಅತ್ಯಗತ್ಯ. ರಾಷ್ಟ್ರಮಟ್ಟದಲ್ಲಿ ಸಮಾನ ಧರ್ಮೀಯ ಪಕ್ಷಗಳೊಡನೆ ಕೂಡಿಕೊಳ್ಳುವುದೂ ಸರಿಯೆ. ಏಕೆಂದರೆ ನಮ್ಮ ದೇಶದ ಮುಖ್ಯ ಸಮಸ್ಯೆಗಳನ್ನು ಪರಿಹರಿಸಬೇಕಾದರೆ ಕೇಂದ್ರ ಸರಕಾರದ ಧ್ಯೇಯ ಧೋರಣೆಗಳು ಬದಲಾವಣೆ ಆದರೆ ಮಾತ್ರ ಸಾಧ್ಯ

ಉದಾಹರಣೆಗೆ ಬಡತನ, ನಿರುದ್ಯೋಗ ಹಾಗೂ ನಿರಕ್ಷರತೆಯ ಪ್ರಶ್ನೆಗಳನ್ನೇ ತೆಗೆದುಕೊಳ್ಳೋಣ. ಈ ಸಮಸ್ಯೆಗಳನ್ನು ಸ್ವಾತಂತ್ರ್ಯದ ಈ ನಲವತ್ತು ವರ್ಷಗಳಲ್ಲಿ ಸಮರ್ಪಕವಾಗಿ ಬಗೆಹರಿಸದಿರುವುದಕ್ಕೆ ಕೇಂದ್ರ ಸರಕಾರದ ತಪ್ಪು. ಧೋರಣೆಗಳೇ ಕಾರಣ. ಅಲ್ಲದೆ ಸ್ವರಾಜ್ಯದ ಸಂಸ್ಪರ್ಶ ಶ್ರೀಸಾಮಾನ್ಯನಿಗೆ ಆಗದೆ ಇರಲೂ ಇದುವರೆಗೆ ಅಧಿಕಾರಕ್ಕೆ ಬಂದ ಕೇಂದ್ರ ಸರಕಾರಗಳೇ ಕಾರಣ. ಆದುದರಿಂದ ಈ ಧೋರಣೆಗಳನ್ನು ಮೂಲಭೂತವಾಗಿ ಮಾರ್ಪಡಿಸಬಲ್ಲ ಸಿದ್ಧಾಂತ ಕಾರ್ಯಕ್ರಮಗಳನ್ನುಳ್ಳ ರಾಜಕೀಯ ಪಕ್ಷ ನಮ್ಮ ದೇಶಕ್ಕೆ ಅಗತ್ಯ

ಇದುವರೆಗಿನ ರಾಜಕೀಯ ಬೆಳವಣಿಗೆಯಲ್ಲಿ ಪಕ್ಷಗಳ ರಚನೆಯಲ್ಲಾಗಲೀ, ಕೆಲಸ ಮಾಡುವ ರೀತಿಯಲ್ಲಾಗಲೀ ಮೂಲಭೂತ ವ್ಯತ್ಯಾಸ ಕಂಡುಬರುತ್ತಿಲ್ಲ. ಈ ವಿಷಯದಲ್ಲಿ ನಿಜವಾಗಿಯೂ ಮೌಲಿಕವಾದ ಚಿಂತನ ದೇಶದಾದ್ಯಂತ ನಡೆಯಬೇಕು. ನಾವು ಈಗಾಗಲೇ ಅಂಗೀಕರಿಸಿಬಿಟ್ಟಿರುವ ಕೆಲವು ಅನಿವಾರ್ಯ ಅನಿಷ್ಟಗಳೆಂಬ ಗ್ರಹಿಕೆಯನ್ನು ಬಿಟ್ಟುಕೊಡಬೇಕು. ಮುಖ್ಯವಾಗಿ ರಾಜಕೀಯ ಪಕ್ಷಗಳಿಗೆ ನಿಧಿ ಸಂಗ್ರಹಿಸುವ ವಿಷಯದಲ್ಲಿ ಹೊಸ ಚಿಂತನ ಮೂಡಿ ಬರಬೇಕು. ಸಿ.ಸುಬ್ರಹ್ಮಣ್ಯಂ ಅವರು ಹೇಳುವಂತೆ ಒಂದೇ ಬಗೆಯ ಮೂರು ಪಕ್ಷಗಳು ಇರುವುದು ಬೇಡ. ಭಿನ್ನ ಭಿನ್ನ ಬಗೆಯ ಪಕ್ಷಗಳು ಬೆಳೆಯಲಿ.

(ಕನ್ನಡ ಪ್ರಭ, ದಿನಾಂಕ 6-1-1988ರ ಸಂಪಾದಕೀಯದಿಂದ).

ಮೇಲಿನ ಅಗ್ರಲೇಖದಲ್ಲಿ ಸಿ.ಸುಬ್ರಹ್ಮಣ್ಯಂ ಅವರು ಮಾಡಿದ ಒಂದು ಹೇಳಿಕೆಯನ್ನು ವಿಮರ್ಶಿಸಲಾಗಿದೆ. ನಮ್ಮ ದೇಶದ ಸಾಮಾಜಿಕ, ಪರಿಸ್ಥಿತಿಯನ್ನು ನೋಡಿದಾಗ, ನಮ್ಮ ದೇಶಕ್ಕೆ ಮೂರೇ ಪಕ್ಷಗಳು ಸಾಕು ಎಂದಿದ್ದಾರೆ ಅವರು. ನಮ್ಮ ದೇಶಕ್ಕೆ ಎಷ್ಟು ಪಕ್ಷಗಳು ಬೇಕು ಎಂಬ ಪ್ರಶ್ನೆ ಬೇರೆ. ಆದರೆ ಮೂರು ಪಕ್ಷಗಳು ಸಾಕು ಎಂಬ ಮಾತು, ಬ್ರಿಟಿಷ್ ಪಾರ್ಲಿಮೆಂಟರಿ ಪದ್ಧತಿಯನ್ನು ಅನುಸರಿಸಿ ಸೂಚಿಸಲಾಗಿದೆ ಎನ್ನಿಸುತ್ತದೆ. ಅಲ್ಲಿ ಕನ್ಸರ್ವೇಟಿವ್, ಲೇಬರ್ ಮತ್ತು ಲಿಬರಲ್ ಎಂಬ ಮೂರು ಪಕ್ಷಗಳು ಮಾತ್ರ ಇವೆ. ದೇಶದ ಅಗತ್ಯವನ್ನು ನೋಡಿಕೊಂಡು ಮೂರರಲ್ಲಿ ಒಂದನ್ನು ಅಲ್ಲಿಯ ಜನತೆ ಅಧಿಕಾರಕ್ಕೆ ತರುತ್ತದೆ. ಆದರೆ ಭಾರತದಲ್ಲಿ ಆ ರೀತಿಯ ವಿವೇಕಯುತ ಮತ ಚಲಾವಣೆ ನಡೆಯುವುದಿಲ್ಲ. ಏಕೆಂದರೆ ನಮ್ಮ ದೇಶದಲ್ಲಿ ನೂರಕ್ಕೆ 80ರಷ್ಟು ನಿರಕ್ಷರಿಗಳು. ಅಲ್ಲದೆ ಇಂಗ್ಲೆಂಡಿನ ಬನೆ ತಾಂತ್ರಿಕ ವ್ಯವಸ್ಥೆ ಭಾರತಕ್ಕಿಂತ ಭಿನ್ನವಾಗಿದೆ. ಅಲ್ಲಿ ಪಕ್ಷಗಳು ನೇತಾರರನ್ನು ಸೃಷ್ಟಿಸುತ್ತವೆ. ಆದರೆ ನಮ್ಮಲ್ಲಿ ನೇತಾರರು ಪಕ್ಷಗಳನ್ನು ಕಟ್ಟುತ್ತಾರೆ. ಅಲ್ಲಿ ತತ್ವಗಳಿಗೆ ಅಂಟಿಕೊಂಡ ಪಕ್ಷಗಳು ಪ್ರಧಾನವಾದರೆ, ನಮ್ಮಲ್ಲಿ ತತ್ವಗಳು ಕಾಲಕ್ಕೆ ತಕ್ಕಂತೆ, ಮಾರ್ಪಾಡಾಗುತ್ತವೆ. ಎಲ್ಲಿಯವರೆಗೆ ಸಾಕ್ಷರತೆ ಉಂಟಾಗಿ ತಮಗೆ ಬೇಕಾದುದನ್ನು ಆರಿಸಿಕೊಳ್ಳಲು ಜನ ತಯಾರಾಗುವುದಿಲ್ಲವೋ ಅಲ್ಲಿಯವರೆಗೆ ಶೋಷಣೆ ತಪ್ಪಿದ್ದಲ್ಲ.

ಸಿ.ಸುಬ್ರಹ್ಮಣ್ಯಂ ಅವರು ಹೇಳುವಂತೆ ಮೂರು ರಾಜಕೀಯ ಪಕ್ಷಗಳ ವ್ಯವಸ್ಥೆ ಬೇಡ, ಭಿನನ ಭಿನ್ನ ಬಗೆಯ ರಾಜಕೀಯ ಪಕ್ಷಗಳು ಬೆಳೆಯಲಿ ಎಂಬುದು ಸಂಪಾದಕರ ಆಶಯ. ಈ ಬಗ್ಗೆ ಎಲ್ಲರೂ ಸ್ವತಂತ್ರವಾಗಿ ವಿಚಾರಿಸಬೇಕು.

# ಅಭ್ಯಾಸ - 3

(1) ಈ ಲೇಖನದಲ್ಲಿ ಸುಬ್ರಹ್ಮಣ್ಯಂ ಅವರ ವಿಚಾರಗಳು ಯಾವುವು, ಸಂಪಾದಕರ ವಿಚಾರಗಳು ಯಾವುವು? ಎರಡಕ್ಕೂ ಕೆಲವು ಮಾತುಗಳನ್ನು ಎತ್ತಿ ಬರೆಯಿರಿ.

| ಸುಬ್ರಹ್ಮಣ್ಯಂ ಅವರ ಮಾತು | ಸಂಪಾದಕರ ಮಾತು |
|---|---|
| (1) | (1) ........................................ |
| ........................................ | ........................................ |
| ........................................ | ........................................ |
| (2) ........................................ | (2) ........................................ |
| ........................................ | ........................................ |
| ........................................ | ........................................ |
| (3) ........................................ | (3) ........................................ |
| ........................................ | ........................................ |
| ........................................ | ........................................ |

(2) ಪ್ರಾದೇಶಿಕ ಪಕ್ಷಗಳು ಇರಬೇಕೇ, ಇರಬಾರದೇ? ಇರಬೇಕೆಂದಾದರೆ ಎಷ್ಟು ಇರಬಹುದು? ಪ್ರಾದೇಶಿಕ ಪಕ್ಷಗಳಿಗೂ ರಾಷ್ಟ್ರೀಯ ಪಕ್ಷಗಳಿಗೂ ಯಾವ ರೀತಿಯ ಸಂಬಂಧವಿರಬೇಕು? ಈ ದಿಕ್ಕಿನಲ್ಲಿ ನಿಮ್ಮ ವಿಚಾರಗಳು ಏನು?

........................................................................................................

........................................................................................................

........................................................................................................

........................................................................................................

(3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

(1) ಶ್ರೀಸಾಮಾನ್ಯ ಎಂದರೆ ಯಾರು?

........................................................................................................

........................................................................................................

........................................................................................................

(2) ಮೌಲಿಕವಾದ ಚಿಂತನೆ ಎಂದರೇನು?

........................................................................................................

........................................................................................................

........................................................................................................

(3) 'ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾದ ರಾಷ್ಟ್ರೀಯ ಪಕ್ಷ ಬೇಕು' ಈ ವಿಚಾರದ ಅರ್ಥವೇನು?

........................................................................................................

........................................................................................................

........................................................................................................

(4) ಪಕ್ಷ - ಪ್ರತಿಪಕ್ಷಗಳ ಕಲ್ಪನೆ, ಸನ್ನಿವೇಶಕ್ಕೆ ಅನುಸಾರವಾಗಿ ಹೇಗೆ ಬೇರೆ ಬೇರೆಯಾಗುತ್ತದೆ, ವಿವರಿಸಿ. ಈ ದಿಕ್ಕಿನಲ್ಲಿ ನೀವು ಕೇಳಿದ, ಓದಿದ, ವಿಚಾರಿಸಿದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

........................................................................................................

........................................................................................................

........................................................................................................

## 19.4 ಸಾರಾಂಶ

ಈ ಅಂಶದಿಂದ ದಿನಪತ್ರಿಕೆಗಳಲ್ಲಿ ಕಂಡುಬರುವ ಸಂಪಾದಕೀಯ ಲೇಖನಗಳನ್ನೂ ಅರ್ಥಮಾಡಿಕೊಳ್ಳಬಲ್ಲವರಾಗುತ್ತೀರಿ. ಪತ್ರಿಕೆಗಳಲ್ಲಿ ಬರುವ ಮಹತ್ವದ, ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳನ್ನು ಕುರಿತು ಬಂದ ಸಂಪಾದಕೀಯವನ್ನು ಅರ್ಥಮಾಡಿಕೊಳ್ಳಬಲ್ಲವರಾಗುತ್ತೀರಿ.

ಸಂಪಾದಕೀಯವು ಸಾಮಾನ್ಯವಾಗಿ ಎಲ್ಲ ಪತ್ರಿಕೆಗಳಲ್ಲಿ ಇದ್ದೇ ಇರುತ್ತದೆ. ಅದು ಸಂಪಾದಕರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಕೆಲವೊಮ್ಮೆ ಒಳ್ಳೆಯ ಸಂಪಾದಕೀಯಗಳು ಮುಂದಾಗುವ ಘಟನೆಗಳನ್ನು ಹೇಳುತ್ತವೆ. ಆದರೆ ಸಾಮಾನ್ಯವಾಗಿ ಸಮಕಾಲೀನ ವಿದ್ಯಮಾನಗಳ ಬಗ್ಗೆ ಓದುಗರನ್ನು ಜಾಣರನ್ನಾಗಿ ಮಾಡುವುದೇ ಸಂಪಾದಕೀಯದ ಗುರಿ.

ಸಂಪಾದಕೀಯದಲ್ಲಿ 3 ಮಹತ್ವದ ಪ್ರಕಾರಗಳನ್ನು ಗುರುತಿಸಬಹುದು.

(1) ಸಾಮಾಜಿಕ
(2) ರಾಜಕೀಯ
(3) ವ್ಯಕ್ತಿ ಪರಿಚಯ

ಅಲ್ಲದೇ ಸಂದರ್ಭಕ್ಕೆ ತಕ್ಕಂತೆ ಇನ್ನೂ ಅನೇಕ ಬಗೆಗಳನ್ನು ಗುರುತಿಸಬಹುದು.

## ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ - 1**

(1) (ಈ) ಮಹಿಳೆಯರ ಬಗ್ಗೆ ಆಗುತ್ತಿರುವ ಅನ್ಯಾಯದಿಂದ ಅವರಿಗೆ ರಕ್ಷಣೆಕೊಡಲು ಕಾನೂನುಗಳು ಬರಬೇಕಾದ ಅಗತ್ಯವಿದೆ.

(2) (ಅ) ಮಹಿಳೆಯರ ಬಗೆಗೆ
(i) ವರದಕ್ಷಿಣೆಯ ನೆಪದಲ್ಲಿ ಚಿತ್ರಹಿಂಸೆ
(ii) ಅವರ ಮಾನಭಂಗ
(iii) ಅವರ ಅಪಹರಣ

(ಆ) ಅಬಲೆಯರನ್ನು ಜೀವಂತ ಸುಟ್ಟು, ಹಿಂಸೆ ಕೊಟ್ಟು ಪೀಡಿಸುವುದು, ಅಪಹರಣ ಮಾಡುವುದು, ಮಾನಭಂಗ ಪಡಿಸುವುದು ಇತ್ಯಾದಿ.

(ಇ) ಸರಕಾರಗಳು ಅಬಲೆಯರ ರಕ್ಷಣೆಗಾಗಿ ಕಾನೂನು ಮಾಡಿದ್ದಾರೆ. ಉಗ್ರಶಿಕ್ಷೆ ಕೊಡಬೇಕೆಂದು ಹೇಳುತ್ತಿದ್ದಾರೆ.

(ಈ) ಸರಕಾರ ಮಾಡಿದ ಕಾಯಿದೆಗಳನ್ನು ಕಟ್ಟುನಿಟ್ಟಾಗಿ ಎಲ್ಲ ಪ್ರದೇಶಗಳಲ್ಲಿ ಜಾರಿಗೆ ತರುವುದು, ಅನ್ಯಾಯವಾಗದಂತೆ ಹೊಸ ಕಾನೂನು ಮಾಡುವುದು.

(3) (ಅ) ಹೆಣ್ಣು = ಗಂಡಿನ ಸ್ತ್ರೀರೂಪ
ಮಹಿಳೆ = ಸ್ತ್ರೀಯೂ ಸಾಮಾಜಿಕ ವ್ಯಕ್ತಿತ್ವವುಳ್ಳವಳು ಎಂಬುದನ್ನು ಸೂಚಿಸುತ್ತದೆ.
ಮಾನಿನಿ = ಸ್ತ್ರೀಯು ಮಾನವುಳ್ಳವಳು ಎಂದು ಹೇಳುತ್ತದೆ
ಅಬಲೆ = ಬಲವಿಲ್ಲದವಳು ಎಂದು ಸೂಚಿಸುತ್ತದೆ
ತರುಣಿ = ವಯಸ್ಸಿಗೆ ಬಂದ ಸ್ತ್ರೀ.

(ಆ) ದೌರ್ಜನ್ಯ = ದುಷ್ಟ ಜನರ ಕೃತ್ಯ
ಅನ್ಯಾಯ = ನ್ಯಾಯವಲ್ಲದುದು, ಕಾನೂನು ಬಾಹಿರವಾದುದು
ಅತ್ಯಾಚಾರ = ಸೌಜನ್ಯದ ಸೀಮೆ ದಾಟಿ ನಡೆಯುವುದು
ಮಾನಭಂಗ = ಅಪಮಾನಗೊಳಿಸುವುದು.

(ಇ) ಕಾಯಿದೆ = ಕಟ್ಟುನಿಟ್ಟು
ಕಾನೂನು = ನ್ಯಾಯಾಲಯದ ನಿಯಮಾವಳಿ
ಶಾಸನ = ಸರಕಾರ ವಿಧಿಸುವ ನಿಯಮ.

(4) ಕೆಳಗೆ ಒಂದು ವಿಷಯವನ್ನು ಕುರಿತು ಅಗ್ರಲೇಖದ ಟಿಪ್ಪಣಿಳನ್ನು ಕೊಟ್ಟಿದೆ - ಇವುಗಳನ್ನು ಉಪಯೋಗಿಸಿ ಲೇಖನ ಮಾಡಬಹುದು.

ದಲಿತ ಎಂಬುದು ಹೇಗೆ ಹುಟ್ಟಿತು. ಹುಟ್ಟಿನಿಂದ ಯಾರೂ ದಲಿತರಲ್ಲ. ಯಾವುದೋ ಒಂದು ಕಾಲಕ್ಕೆ ಕೈಯಲ್ಲಿ ಅಧಿಕಾರವಿದ್ದ ಸಮಾಜದ. ಮಾಡಿದ ವ್ಯವಸ್ಥೆ—ಇಂದು ದಲಿತರ ಪರಿಸ್ಥಿತಿ—ಅವರು ಹೇಗೆ ಎಲ್ಲ ರಂಗದಿಂದ ವಂಚಿತರಾಗಿದ್ದಾರೆ ಎಂಬ ವಿವರ, ಅದರ ಬಗೆಗೆ ಎಚ್ಚರಿಕೆ — ಉಪಾಯ — ಸಾಮಾಜಿಕ ಎಚ್ಚರಿಕೆ. ದಲಿತರ ಉದ್ಧಾರದ ವಿಧಾನ.

**ಅಭ್ಯಾಸ - 2**

(1) ದಿಗ್ಗಜ = ಎಂಟು ದಿಕ್ಕುಗಳಲ್ಲಿ ಇರುವ ಕಾಲ್ಪನಿಕ ಆನೆಗಳು
ಕೊತ್ತಲ = ಕೋಟೆ
ಸರಹದ್ದು = ಸೀಮೆಗಳು
ವಿಭಜನೆ = ಒಡೆಯುವಿಕೆ, ಹಂಚುವಿಕೆ
ಅವಿಚ್ಛಿನ್ನ = ತುಂಡಾಗದ
ಬಹುಸಂಖ್ಯಾತ = ಅನೇಕ ಜನ ಇರುವ
ಮುಂಚೂಣಿ = ಮುಂದೆ ಇರುವ ಭಾಗ
ಯಮಯಾತನೆ = ತುಂಬಾ ವೇದನೆ, ಬಹಳ ನೋವು
ಅಳ್ಳೆದೆ = ಪುಕ್ಕಲು ಎದೆ
ಸಂಘರ್ಷ = ತಿಕ್ಕಾಟ, ಹೋರಾಟ

(2) ಒಡೆದು ಆಳು = ವೈರಿಯನ್ನು ಎದುರಿಸುವುದು ಕಷ್ಟವಾದಾಗ, ಅವರಲ್ಲಿ ಒಡಕನ್ನು ಉಂಟುಮಾಡಿ ಆಮೇಲೆ ಅವರ ಮೇಲೆ ಅಧಿಕಾರ ನಡೆಸುವುದು.
ಚಳುವಳಿ = ಯಾವುದೇ ಬೇಡಿಕೆಗಾಗಿ, ವಿವಿಧ ರೀತಿಯ ಒತ್ತಾಯ ಮಾಡುವುದು.
ಅಪಸ್ವರ ಎತ್ತು = ಯಾವುದೋ ಕಾರ್ಯ ಮಾಡುತ್ತಿದ್ದಾಗ ಆಗುವುದೋ ಇಲ್ಲವೋ ಎಂಬ ಶಂಕೆಯಿಂದ ಏನನ್ನೋ ಮಾತಾಡುವುದು.
ಲಷ್ಕರಿ ಗುಣಗಳು = ಕಟ್ಟು ನಿಟ್ಟಾದ, ನಡವಳಿಕೆ
ಅದ್ವಿತೀಯವಾಗಿ = ಎರಡಿಲ್ಲದಂತೆ
ರಕ್ತದ ಓಕುಳಿ = ಆಟಕ್ಕಾಗಿ, ಅಥವಾ ಜೀವದ ಬೆಲೆ ಅರಿಯದೇ ರಕ್ತಪಾತ ಮಾಡುವುದು.

(3) ಹಿಂದುಗಳೇ ಬೇರೆ (ಆಗಿರುತ್ತಾರೆ)
ಮುಸ್ಲಿಮರೇ ಬೇರೆ (ಆಗಿರುತ್ತಾರೆ)
ಇದೇ ರೀತಿ ಬೇರೆ ವಾಕ್ಯಗಳನ್ನು ಸಂಗ್ರಹಿಸಿರಿ.

(4) ಸೀತೆ ತುಂಬಾ ಬುದ್ಧಿವಂತೆ (ಆಗಿದ್ದಾಳೆ)
ಇಲ್ಲಿ ಕ್ರಿಯಾಪದ ಬಿಡಬಹುದು.
ಗೋಪಾಲ ಹೊಲಕ್ಕೆ ಹೋಗುತ್ತಾನೆ.
ಇಲ್ಲಿ ಹೋಗುತ್ತಾನೆ ಎಂಬುದನ್ನು ಬಿಡಲು ಆಗದು.

**ಅಭ್ಯಾಸ - 3**

| | ಸುಬ್ರಹ್ಮಣ್ಯಂ ಅವರ ಮಾತು | | ಸಂಪಾದಕರ ಮಾತು |
|---|---|---|---|
| (1) | ಪ್ರಾದೇಶಿಕ ಪಕ್ಷಗಳು ತಮ್ಮ ಚಟುವಟಿಕೆಗಳನ್ನೆಲ್ಲ ಪ್ರಾದೇಶಿಕ ಮಟ್ಟಕ್ಕೆ ಸೀಮಿತಗೊಳಿಸತಕ್ಕದ್ದು | (1) | ಸಿ.ಸುಬ್ರಹ್ಮಣ್ಯಂ ಅವರ ವಿಚಾರ ಕುರಿತು ದೇಶವ್ಯಾಪಿ ಚರ್ಚೆ ನಡೆಯುವುದು ಅಗತ್ಯ |
| (2) | ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಇಂಥ ಪಕ್ಷಗಳಿಗೆ ಅವಕಾಶ ಇರತಕ್ಕದ್ದಲ್ಲ. | (2) | ಕೆಲವು ಪಕ್ಷಗಳು ಪ್ರಾದೇಶಿಕ ಎನಿಸಿಕೊಂಡರೂ ರಾಷ್ಟ್ರ ವಿರೋಧಿ ಅಲ್ಲ. |
| (3) | ನಮ್ಮ ದೇಶಕ್ಕೆ ಮೂರು ರಾಷ್ಟ್ರೀಯ ಪಕ್ಷಗಳು ಸಾಕು | (3) | ಅಂಥ ಪಕ್ಷಗಳು ತಮ್ಮ ರಾಷ್ಟ್ರೀಯ ಭೂಮಿಕೆಯೊಂದನ್ನು ಕಂಡುಕೊಳ್ಳುವುದು ಅತ್ಯಾಗತ್ಯ |

(2) ಪ್ರಾದೇಶಿಕ ಪಕ್ಷಗಳು ಇರಬೇಕು. ಒಂದು ರಾಷ್ಟ್ರೀಯ ಪಕ್ಷ ಒಂದು ಪ್ರಾದೇಶಿಕ ಪಕ್ಷ ಇರಲೇಬೇಕು, ಜನತಂತ್ರಕ್ಕೆ ಇದು ಆರೋಗ್ಯಕರ.

(3)

(1) ಶ್ರೀ ಸಾಮಾನ್ಯ ಎಂದರೆ ಸರ್ವ ಸಾಮಾನ್ಯ ಜನ.
(2) ಮೌಲಿಕವಾದ ಚಿಂತನೆ ಎಂದರೆ ಶ್ರೇಷ್ಠವಾದ ವಿಚಾರ, ಆಲೋಚನೆ.
(3) ಕಾಂಗ್ರೆಸ್ ಪಕ್ಷವನ್ನು ರಾಜಕೀಯವಾಗಿ ಎದುರಿಸುವ ಪಕ್ಷ ಬೇಕು. ಆಂದರೆ ಪ್ರಜೆಗಳಿಗೆ ಒಳ್ಳೆಯ ಆಯ್ಕೆ ಇರುತ್ತದೆ. ಯಾವ ಪಕ್ಷ ಒಳ್ಳೆಯ ಕೆಲಸ ಮಾಡುವುದೋ ಆ ಪಕ್ಷಕ್ಕೆ ಮತನೀಡಲು ಅವಕಾಶವಿರುತ್ತದೆ.
(4) ಯಾವುದೋ ಒಂದು ಪಕ್ಷ ಚುನಾವಣೆಯಲ್ಲಿ ಗೆದ್ದು ಅಧಿಕಾರದಲ್ಲಿದ್ದಾಗ ಇನ್ನೊಂದು ಪಕ್ಷ ಪ್ರತಿಪಕ್ಷ ವಾಗುತ್ತದೆ. ಇನ್ನೊಂದು ಬಾರಿ ಆ ಪಕ್ಷವು ಅಧಿಕಾರಕ್ಕೆ ಬಂದರೆ ಈ ಪಕ್ಷ ಪ್ರತಿಪಕ್ಷವಾಗುತ್ತದೆ. ಆದುದರಿಂದ, ಪಕ್ಷ ಪ್ರತಿಪಕ್ಷಗಳು ನಿಶ್ಚಿತವಲ್ಲ.